# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/06/2016-17; ದಿನಾಂಕ: 27.10.2016

| ವಾದಿ | ಪ್ರತಿವಾದಿ |
| --- | --- |
| 1.ಚನ್ನಮ್ಮ ತಂದೆ ಲೇಟ್ ಸಿ ನಾಗರಾಜ | 1.ಗಂಗಮ್ಮ ಗಂಡ ಮೈಲಾರಪ್ಪ |
| 2.ರೇಖಾ ತಂದೆ ಲೇಟ್ ಸಿ ನಾಗರಾಜ | ಆನಂದದೇವನಹಳ್ಳಿ ಗ್ರಾಮ, ಹ.ಬೊ.ಹಳ್ಳಿ(ತಾ) |
| 3.ವೀರೇಶ ತಂದೆ ಲೇಟ್ ಸಿ ನಾಗರಾಜ | 2.ಜಿ ನಿಂಗಪ್ಪ ತಂದೆ ಕಾಳಪ್ಪ, |
| ಕಡಲಬಾಳು ಗ್ರಾಮ, ಹ.ಬೊ.ಹಳ್ಳಿ(ತಾ) | ಹೊಸಆನಂದದೇವನಹಳ್ಳಿ ಗ್ರಾಮ,ಹ.ಬೊ.ಹಳ್ಳಿ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಕಡಲಬಾಳು ಗ್ರಾಮದ ಸರ್ವೆ ನಂ.321/ಡಿ ವಿ: 03.55 ಎಕರೆ ಜಮೀನನ್ನು ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಕಡಲಬಾಳು ಗ್ರಾಮದ ಸರ್ವೆ ನಂ.321/ಡಿ ವಿ: 03.55 ಎಕರೆ ಜಮೀನನ್ನು ವಾದಿಗಳು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ವಾದಿಗಳ ಕೋರಿಕೆ ಪ್ರಕಾರ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-109/2015-16; ದಿ: .05.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-28.07.2016 ರಿಂದ ದಿ:27.10.2016ರ ವರೆಗೆ ಉಭಯರಿಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು, ವಿಚಾರಣೆಗೆ ವಾದಿಗಳು ಸತತ ಗೈರು ಹಾಜರಾಗಿರುತ್ತಾರೆ, ಈ ಪ್ರಕರಣದಲ್ಲಿನ ವಿವಾದಿತ ಜಮೀನಿನಲ್ಲಿ ತನಗೂ ಹಿಸ್ಸಾ ಇರುವುದರಿಂದ ಪ್ರಕರಣದಲ್ಲಿ ತನ್ನನ್ನು 02ನೇ ಪ್ರತಿವಾದಿಯನ್ನಾಗಿ ಪರಿಗಣಿಸುವಂತೆ ಶ್ರೀ ಜಿ ನಿಂಗಪ್ಪ ತಂದೆ ಕಾಳಪ್ಪ ಇವರು ಕೋರಿರುವುದರಿಂದ ಅವರನ್ನು 02ನೇ ಪ್ರತಿವಾದಿಯನ್ನಾಗಿ ಪರಿಗಣಿಸಲಾಗಿದ್ದು ವಿಚಾರಣೆಗೆ ಹಾಜರಾಗಿರುತ್ತಾರೆ.

ವಾದಿಗಳು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಹಾಲಿ ಪಹಣಿ ದಾಖಲೆಯ ಪ್ರಕಾರ ವಿವಾದಿತ ಜಮೀನು ಸಿ ನಾಗರಾಜ ತಂದೆ ಲೇಟ್ ಸಿ ವೀರಭದ್ರಪ್ಪ ಇವರ ಹೆಸರಿನಲ್ಲಿ ಹಕ್ಕುದಾಖಲೆ ಇರುತ್ತದೆ, ಸದರಿಯವರು ದಿನಾಂಕ:19.06.15 ರಂದು ಮೃತರಾಗಿರುವುದು ದಿನಾಂಕ:21.07.2015ರ ಮರಣ ಪ್ರಮಾಣ ಪತ್ರದ ದಾಖಲೆಯಿಂದ ಕಂಡುಬರುತ್ತದೆ, ಸದರಿ ಪಟ್ಟಾದಾರರ ವಾರಸುದಾರರಾಗಿ ವಾದಿಗಳು ಇರುವುದು ದಿನಾಂಕ:30.11.2015ರ ವಂಶವೃಕ್ಷ ಧೃಡೀಕರಣ ಪತ್ರದ ಪ್ರಕಾರ ತಿಳಿದು ಬರುತ್ತದೆ, ಆ ಪ್ರಕಾರ ವಾದಿಗಳು ಪೋತಿವಾರಸು ಹಕ್ಕುಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಬಗ್ಗೆ ತಕರಾರುದಾರರಾದ 02ನೇ ಪ್ರತಿವಾದಿಯು ಆಕ್ಷೇಪಣೆ ವ್ಯಕ್ತಪಡಿಸುತ್ತಾ, ವಿವಾದಿತ ಜಮೀನು ಹಾಲಿ ಪಟ್ಟಾದಾರರ ಹೆಸರಿನಲ್ಲಿ ಹಕ್ಕುದಾಖಲೆಯು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ರವರ ನ್ಯಾಯಾಲಯದ ಆದೇಶ ಸಂ/ಕಂ/ಪಹಣಿ/ಅಪೀಲು/35/08.09; ದಿ:22.08.09ರ ಪ್ರಕಾರ ದಾಖಲಾಗಿದ್ದು, ಸದರಿ ಆದೇಶದ ವಿರುದ್ದ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಿದ್ದು ಪ್ರಕರಣ ಸಂ/ಕಂ/ಅಪೀಲು/149/2010.11ರಲ್ಲಿ ವಿಚಾರಣೆ ಹಂತದಲ್ಲಿರುತ್ತದೆ ಮತ್ತು ಹಗರಿಬೊಮ್ಮನಹಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಒ.ಎಸ್/18/2012ರಲ್ಲಿಯೂ ಸಹಾ ಪ್ರಕರಣ ದಾಖಲಾಗಿ ಹಾಲಿ ವಿಚಾರಣೆ ಹಂತದಲ್ಲಿರುತ್ತದೆ,ಕಾರಣ ವಾದಿಗಳ ಕೋರಿಕೆಯನ್ನು ತಿರಸ್ಕರಿಸುತ್ತಾ ಪಹಣಿ ದಾಖಲೆಯಲ್ಲಿ ಯಥಾ ಸ್ಥಿತಿ ಮುಂದುವರಿಸಲು ವಿನಂತಿಸಿರುತ್ತಾರೆ.

ಈ ಕುರಿತು ದಾಖಲೆಗಳನ್ನು ಪರಿಶೀಲಿಸಲಾಗಿ, 1.ವಿವಾದಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ ಸಿ ನಾಗರಾಜ ತಂದೆ ಲೇಟ್ ಸಿ ವೀರಭದ್ರಪ್ಪ ಇವರ ಹೆಸರಿನಲ್ಲಿ ಹಕ್ಕುದಾಖಲೆ ಇದ್ದು, ಸದರಿಯವರ ಹೆಸರು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ರವರ ನ್ಯಾಯಾಲಯದ ಆದೇಶ ಸಂ/ಕಂ/ಪಹಣಿ/ಅಪೀಲು/35/08.09; ದಿ:22.08.09ರ ಪ್ರಕಾರ ಮತ್ತು ಹಕ್ಕುಬದಲಾವಣೆ ಆದೇಶ ಸಂ/ಹೆಚ್-87/2014.15ರನ್ವಯ ದಾಖಲಾಗಿರುವುದು ಪಹಣಿ ದಾಖಲೆಯ ಪ್ರಕಾರ ಕಂಡುಬರುತ್ತದೆ.

2.ಈ ಜಮೀನಿಗೆ ಸಂಬಂದಿಸಿದಂತೆ ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ರವರ ನ್ಯಾಯಾಲಯದ ಆದೇಶ ಸಂ/ಕಂ/ಪಹಣಿ/ಅಪೀಲು/35/08.09; ದಿ:22.08.09ರ ಆದೇಶ ವಿರುದ್ದ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಿದ್ದು ಪ್ರಕರಣ ಸಂ/ಕಂ/ಅಪೀಲು/149/2010.11ರಲ್ಲಿ ವಿಚಾರಣೆ ಹಂತದಲ್ಲಿರುವುದು ಮತ್ತು ಹಗರಿಬೊಮ್ಮನಹಳ್ಳಿ ಸಿವಿಲ್ ನ್ಯಾಯಾಲಯದ ಪ್ರಕರಣ ಸಂ/ಒ.ಎಸ್/18/2012ರಲ್ಲಿಯೂ ಸಹಾ ಪ್ರಕರಣ ದಾಖಲಾಗಿ ಹಾಲಿ ವಿಚಾರಣೆ ಹಂತದಲ್ಲಿರುವುದು 02ನೇ ಪ್ರತಿವಾದಿ ಹಾಜರುಪಡಿಸಿದ ದಾಖಲೆಯಿಂದ ಕಂಡುಬರುತ್ತದೆ.

ಮೇಲಿನ ಅಂಶಗಳಿಂದ ವಿವಾದಿತ ಜಮೀನಿನ ವಿವಾದದ ಕುರಿತು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಅರ್ಜಿ ಮತ್ತು ಹಗರಿಬೊಮ್ಮನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಅರ್ಜಿ ದಾಖಲಾಗಿ ಹಾಲಿ ವಿಚಾರಣಾ ಹಂತದಲ್ಲಿರುವುದರಿಂದ, ವಿವಾದಿತ

ಜಮೀನಿನ ಪೋತಿ ವಾರಸು ಹಕ್ಕುಬದಲಾವಣೆ ಅರ್ಜಿಯನ್ನು ತಿರಸ್ಕರಿಸಿ ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಕಡಲಬಾಳು ಗ್ರಾಮದ ಸರ್ವೆ ನಂ.321/ಡಿ ವಿ: 03.55 ಎಕರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ವಾದಿಗಳು ಸಲ್ಲಿಸಿದ ಹಕ್ಕುಬದಲಾವಣೆ ಅರ್ಜಿಯನ್ನು ತಿರಸ್ಕರಿಸುತ್ತಾ, ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 27.10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:1.ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

2.ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.